9 ಶ್ರೀರಂಗಪಟ್ಣ 10 ಕೃಷ್ಣರಾಜಪೇಟೆ 11 ನಾಗಮಂಗಲ 12 ಮಂಡ್ಯ 13 ಮಳವಳ್ಳಿ	1896ನೇ ಇಸವಿ ಜುಲೈ 18ರಲ್ಲಿ ಫ್ರೆಂಚ್‌ರಾಕ್ಸ್ ಸಬ್ ಡಿವಿಜ್ ಆಫಿಸಿನಲ್ಲಿ	ಫ್ರೆಂಚ್‌ರಾಕ್ಸ್ ಸಬ್ ಡಿವಿಜ್ ಆಫಿಸರವರು.

(2.) ಜಡನವಾಲ್‌ದಾರನು ಹರಾಜು ಕಾಲದಲ್ಲಿ ತನ್ನ ಸವಾಲ್ ಅಂಗೀಕರಿಸಲ್ಪಟ್ಟ ಕೂಡ್ಲೆ ಸವಾಲ್ ಮೊಬಲಗು ಪೈಕಿ ಶೇಕಡಾ 25 ರೂಪಾಯಿಗಳ ಪ್ರಕಾರ ಡಿಪಾಜಿಟ್ ಹಾಜರ್ಮಾಡಬೇಕು. ಬಾಕಿ ಮೊಬಲಗನ್ನು ರೂಪಾಯಿ 1ಕ್ಕೆ ಒಂದಾಣೆ ಮೇರೆ ಲೋಕಲ್ ಸೆಸ್ ಸಹಿತ ಹರಾಜು ಕಾಯಂಆದ ಸಂಗತಿ ತಿಳಿಸಲ್ಪಟ್ಟ ತಾರೀಖು ಲಾಗಾಯತು 7 ದಿವಸಗಳಲ್ಲಿ ಪಾವತಿಮಾಡಬೇಕು. ಹಾಗೆ ಬಾಕಿ ಮೊಬಲಗನ್ನ ಪಾವತಿ ಮಾಡುವದಕ್ಕೆ ಜಡನವಾಲ್‌ದಾರನು ತಪ್ಪಿದಲ್ಲಿ ಅವನಿಂದ ಹಾಜರ್ಮಾಡಲ್ಪಟ್ಟ ಡಿಪಾಜಿಟ್ ಮೊಬಲಗು ಸರ್ಕಾರಕ್ಕೆ ದಂಡವಾಗಿ ತೆಗೆದುಕೊಳ್ಳಲ್ಪಡುವದು, ಡಿಪಾಜಿಟ್ ಹಾಜರ್ಮಾಡುವದಕ್ಕಾಗಲಿ ಅಥವಾ ಬಾಕಿ ಹಣವನ್ನ ಪಾವತಿಮಾಡುವದಕ್ಕಾಗಲಿ ತಪ್ಪಿದರೆ ಈ ಬಾಬು ಪುನಹ ಹರಾಜು ಮಾಡಲ್ಪಟ್ಟು ಅದರಿಂದ ಉಂಟಾಗುವ ನಷ್ಟಕ್ಕೆ ಮೊದಲ್ ಸವಾಲ್‌ದಾರನನ್ನ ಗುರುವಾಡಲ್ಪಡುತ್ತೆ.

(3.) ಇತರ ಷರತ್ತುಗಳು ಯಾವವಂದರೆ—

(a) ಇಜಾರೆದಾರನು ಹಿಡುವಳಿ ಜಮೀನಿನಲ್ಲಿರತಕ್ಕ ಕುರಂಗದ ಕಲ್ಲುಗಳನ್ನ ಆಯಾ ಹಿಡುವಳಿದಾರನ ಅನುಮತಿ ವಿನಹ ಆರಿಸಿಕೊಳ್ಳಕೂಡದು. ಪರಂತು ತಪ್ಪ್ಯಾ ಹಿಡುವಳೀ ಜಮೀನಿನಲ್ಲಿ ಇರತಕ್ಕ ಕಲ್ಲುಗಳು ಜಮಾಯಿಸಿ ಕೊಳ್ಳುವದಕ್ಕಾಗಲಿ ಅಥವಾ ಇಜಾರೆದಾರನಿಗೇ ವಿನಹ ಇತರರಿಗೆ ಮಾರುವದಕ್ಕೇ ಆಗಲಿ ಹಿಡುವಳಿದಾರರಿಗೆ ಅಧಿಕಾರವಿರುವದಿಲ್ಲ.

(b) ಇಜಾರೆದಾರನು ಹುಲ್ಲುಮನ್ನಿ ಯಾ ಹುಲ್ಲುಗಾವಲ್ ಇಜಾರೆದಾರ್ರ ಹಕ್ಕಿಗೆ ಆಟಂಕ ಪಡಿಸಕೂಡದು.

(c) ಹಿಡುವಳಿಯಲ್ಲಿ ಯಿಲ್ಲಾ ಜಮೀನುಗಳನ್ನ ಸರಕಾರದವರು ದರಖಾಸ್ತುಗಳು ಬಂದಾಗ ಸಾಗುವಳಿಗೆ ಕೊಡತಕ್ಕ ವಿಷಯದಲ್ಲಿ ಇಜಾರೆದಾರನ ಅಭ್ಯಂತರವೇನೂ ಯಿರುವದಿಲ್ಲ. ಮತ್ತು ಅಂಥಾ ಜಮೀನುಗಳಲ್ಲಿ ಶಿಕ್ಕುವ ಕುರಂಗದ ಕಲ್ಲುಗಳನ್ನ ತೆಗೆದುಕೊಳ್ಳಲು ಅವರಿಗೆ ಹಕ್ಕು ಯಿರುತ್ತೆ.

(d) ಕಲ್ಲುಗಳನ್ನು ಜಮಾಯಿಸುವದಕ್ಕೊಸ್ಕರ ಜಮೀನುಗಳನ್ನ ಇಜಾರೆದಾರನು ಅಗೆಯಕೂಡದು. ಬಂದು ವೇಳೆ ಅಗೆದರೆ ಸಾಗುವಳಿಗೆ ಅನುಕೂಲಿಸುವ ಹಾಗೆ ಗುಣಿಗಳನ್ನ ಮುಚ್ಚಿ ಸರಿಪಡಿಸಬೇಕು.

(e) ಕಲ್ಲುಗಳು ಜಮಾಯಿಸಲ್ಪಟ್ಟ ಗ್ರಾಮ, ಇಷ್ಟುಮಣ ಕಲ್ಲು ಮತ್ತು ಅದು ರಫ್ತಾಗುವ ಸ್ಥಳ ಈ ತಪ್ಶೀಲ್ ಕಂಡು ತಾಲ್ಲೂಕು ಆಮಲ್‌ದಾರ್ರಿಂದ ಬಂದು ಮೂಫೀ ಲೈಸೆನ್ಸ್ ಪಡೆಯದೆ ಕಲ್ಲುಗಳನ್ನು ಇಜಾರೆದಾರ್ರು ಸಾಗಿಸಕೂಡದು.

ಬಿ. ಕೆ. ವೆಂಕಟವರದಯ್ಯಂಗಾರ್,
ಡೆಪ್ಯುಟಿ ಕಮ್ಮಿಷನರ್.

ಫ್ರೆಂಚ್‌ರಾಕ್ಸ್ ಸಬ್ ಡಿವಿಜ್ ಆಫಿಸ್.

ತಾರೀಖು 1ನೇ ಜುಲೈ 1896ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಮಂಡ್ಯ ತಾಲ್ಲೂಕು ಕುದರಗುಂಡಿ ಹೋಬಳಿ ಸರ್ವಮಾನ್ಯ ಗವಡಗೆರೇ ಗ್ರಾಮದ ಕೆರೆಗೆ ನೀರು ಬರತಕ್ಕ ನೀರು ಹರಿಯುವ ಹಳ್ಳದಲ್ಲಿ, ಬಂದು ಕುಡಿಕೆಯಲ್ಲಿ ದೊರಕಿದ (17—4—0) ಅಂದಾಜಾ ಪೌಳ್ಳ ಚಿನ್ನದ ಬುಗಡಿ ಅದದು 4 ಡಿಟೋ ನಾಗರ ಕಡಕು 2 ಕೊಂಡ್ಲು 1 ಕಂಟಿರಾಯಿ ಹಣ 7 ಗೂಪಹಣ 4 ಸಹ ದೊರಕಿದ್ದಾಗಿ ಹಾಜರಾಗಿರುವದು ಅವಾನತ್ತು ಯಿಧೆ. ಈ ನಿಕ್ಷೇಪಕ್ಕಾಗಲಿ ಅಥವಾ ಇದರ ವಂದು ಭಾಗಕ್ಕಾಗಲಿ ಹಕ್ಕುದಾರರಾಗಿ ಇರತಕ್ಕವರು ಖುದ್ದಾಗಿಯೇ ಆಗಲಿ ಅಥವಾ ವಕೀಲರ ಮುಖಾಂತರವಾಗಿಯೇ ಆಗಲಿ 1896ನೇ ಇಸವಿ ಡಿಸೆಂಬರ್ ತಾರೀಖು 18ನೇ ಮಧ್ಯಾನ್ನ ದಿವಿ 12 ಘಂಟೆಗೆ ಫ್ರೆಂಚರಾಕ್ಸ್ ಸಬ್ ಡಿವಿಜ್ ಆಫಿಸ್ ರೂಬರೂಬ್ ಹಾಜರಾಗಿ ಅವುಗಳಲ್ಲಿ ತನುಗಿರುವ ಹಕ್ಕನ್ನ ಸ್ಥಿರಪಡಿಸಿ ಕೊಡಬೇಕು.

ಪಿ. ಪಂಚನಾಥರಾವ್,
ಸಬ್ ಡಿವಿಜ್ ಆಫಿಸರ್.

ಮೈಸೂರ ಗೆಜೆಟ್ ಚಂದಾ ದರ ವಗೈರೆ.

ತಾರೀಖು 26ನೇ ಜನವರಿ 1889.

ಮೈಸೂರ ಗೆಜೆಟ್ ಬೆಂಗಳೂರಲ್ಲಿ ಛಾಪಿಸಲ್ಪಡುತ್ತೆ, ಮತ್ತು ಸದರೀ ಗೆಜೆಟಿನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸು ಮುಂತಾದವುಗಳೂ ಬೆಂಗಳೂರಲ್ಲಿರುವ ಮೈಸೂರ ಗೆಜೆಟ್ ಕಂಪೈಲರವರ ಹೆಸರಿಗೆ ವಿಳಾಸ ಬರಯಲ್ಪಟ್ಟು ರವಾನಿಸಲ್ಪಡತಕ್ಕದ್ದು.